## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 485/2021 ಪಿ.ಡಬ್ಲ್ಯೂಃ 2

ಸಿಡಬ್ಲೂಃ 1

ಸಾಕ್ಷಿದಾರರ ಹೆಸರು : ದಯಾನಂದ

ತಂದೆಯ ಹೆಸರು : ಶ್ರೀಮಂತು

ವಯಸ್ಸು : 37 ವರ್ಷ

ಉದ್ಯೋಗ : ಅಬಕಾರಿ ನಿರೀಕ್ಷಕರು , ಕಾರವಾರ ವಲಯ

ವಾಸ್ತವ್ಯ : ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 03-03-2022

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು ದಿನಾಂಕಃ 02.12.2020 ರಿಂದ ಇಲ್ಲಿಯವರೆಗೆ ಅಬಕಾರಿ ನಿರೀಕ್ಷಕರಾಗಿ ಕಾರವಾರ ವಲಯದಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 15.04.2021 ರಂದು ಆಬಕಾರಿ ಉಪ ಅಧೀಕ್ಷಕರು ಉಪವಿಭಾಗ ಕಾರವಾರ ಇವರ ನಿರ್ದೇಶದನಂತೆ ಮಧ್ಯಾಹ್ನ ಸುಮಾರು 1.00 ಗಂಟೆಗೆ ನಾನು , ಚಾಸಾ.2 ಮತ್ತು 3, ವಾಹನ ಚಾಲಕ ನೂರೂಲ್ಲಾ ಖಾನ್ ಇವರೊಂದಿಗೆ ಇಲಾಖಾ ವಾಹನ ಸಂಖ್ಯೆ ಕೆ ಎ 30 ಜಿ 0492 ನೇದರಲ್ಲಿ ಕಾರವಾರ ಶಹರದಲ್ಲಿ ಗಸ್ತುಮಾಡುತ್ತಿರುವಾಗ ಮಧ್ಯಾಹ್ನ ಸುಮಾರು 2.00 ಗಂಟೆಗೆ ಖಾಪ್ರಿ ದೇವಸ್ಥಾನದ ಹತ್ತಿರ ರಸ್ತೆಗಾವಲು ಮಾಡುತ್ತಿರುವಾಗ ನನಗೆ ಸುಮಾರು 2.15 ಗಂಟೆಗೆ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನ ಸಂಖ್ಯೆ ಕೆ ಎ 30 ಆರ್ 6343 ನೇದರ ಮೇಲೆ ಅಕ್ರಮವಾಗಿ ಗೋವಾ ಮದ್ಯವನ್ನು ಸಾಗಾಟ ಮಾಡುತ್ತಿರುವಾಗಿ ಬಾತ್ಮಿ ಬಂದಿತು. ಸದರಿ ವಾಹನವನ್ನು ನಾವು ಕಾಯುತ್ತಿದ್ದಾಗ ಸುಮಾರು 2.20 ಕ್ಕೆ ಸದರಿ ವಾಹನ ಬರುತ್ತಿರುವುದು ಕಂಡು ನಿಲ್ಲಿಸಲು ಸೂಚಿಸಿದಾಗ ಇಲಾಖಾ ವಾಹನ ಮತ್ತು ಸಮವಸ್ತ್ರದಲ್ಲಿದ್ದ ನಮ್ಮನ್ನು ಕಂಡು ಆ ವ್ಯಕ್ತಿಯು ತನ್ನ ವಾಹನವನ್ನು ನಿಲ್ಲಿಸದೇ ವೇಗವಾಗಿ ಚಲಾಯಿಸಿಕೊಂಡು ಹೋದನು. ಆತನನ್ನು ನಮ್ಮ ಇಲಾಖಾ ವಾಹನದಲ್ಲಿ ಬೆನ್ನಟ್ಟಿದಾಗ ಕೋಡಿಬಾಗದ ಕಾಳಿ ರಿವರ್ ಗಾರ್ಡನ ಕಡೆಯಿಂದ ಸುಂಕೇರಿ ಕಡೆಗೆ ಹೋಗುವ ರಸ್ತೆಯಲ್ಲಿ ಸರಕಾರಿ ಮರಾಠಿ ಶಾಲೆಯ ಎದುರುಗಡೆ ರಸ್ತೆಯ ಪಕ್ಕದಲ್ಲಿ ವಾಹನವನ್ನು ಬಿಟ್ಟು ಮನೆಗಳ ಸಂಧಿಯಲ್ಲಿ ಓಡಿ ಪರಾರಿಯಾದನು. ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದರೂ ಆ ವ್ಯಕ್ತಿ ಸಿಗಲಿಲ್ಲಾ. ಚಾಸಾ.2 ರವರು ಓಡಿ ಹೋದ ವ್ಯಕ್ತಿ ಸುನೀಲ ಗೋಕುಲದಾಸ ಪಡವಳಕರ, ಸಾಃ ಹೊಟೆಗಾಳಿ ಎಂದು ಗುರುತಿಸಿದರು.

3. ಸದರಿ ವಾಹನವನ್ನು ನೋಡಿದಾಗ ಮೇಲ್ನೋಟಕ್ಕೆ ವಾಹನದ ಕಾಲಿಡುವ ಜಾಗದಲ್ಲಿ ಒಂದು ಕಪ್ಪು ಬಣ್ಣದ ಬ್ಯಾಗ ಮತ್ತು ಎರಡು ಕಪ್ಪು ಬಣ್ಣದ ಟ್ಯೂಬಗಳು ಕಂಡು ಬಂದವು. ರಸ್ತೆಯಲ್ಲ ಸಂಚರಿಸುತ್ತಿದ್ದ ವಾಹನಸವಾರರಿಗೆ ಮತ್ತು ನೆರೆದ ಜನರಿಗೆ ಪಂಚರಾಗಿ ಸಹಕರಿಸಲು ಕೋರಿದಾಗ ಅವರು ಒಪ್ಪದೇ ಇದ್ದರಿಂದ ಚಾಸಾ.2 ಮತ್ತು ಚಾಸಾ.3 ರವರಿಗೆ ಪಂಚರಾಗಿ ಸಹಕರಿಸಲು ಕೋರಿದಾಗ ಅವರು ಒಪ್ಪಿಕೊಂಡರು. ಮಾನ್ಯ ನ್ಯಾಯಾಲಯದಿಂದ ಸರ್ಚ ವಾರಂಟ ಪಡೆಯಲು ಸಮಯಾವಕಾಶ ಇಲ್ಲದಿರುವ ಕಾರಣ ಸ್ಥಳದಲ್ಲೇ ಕ.ಅ.ಕಾಯ್ದೆ ಕಲಂ 54ರ ಅಡಿಯಲ್ಲಿ ಶೋಧನಾ ಸಮ್ಮುಚಿತ ಪತ್ರವನ್ನು ತಯಾರಿಸಿದೆನು. ವಾಹನ ಶೋಧಿಸುವ ಸಮಯಕ್ಕೆ ಮಧ್ಯಾಹ್ನ ಸುಮಾರು 2.30 ಆಗಿತ್ತು. ನಂತರ ಪರಸ್ಪರ ಅಂಗಜಪ್ತಿ ಮಾಡಿಕೊಂಡು ಸದರಿ ಕಪ್ಪು ಬಣ್ಣದ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 750 ಎಂ ಎಲ್ ನ ಗೋವಾ ಸ್ಪೆಷಲ್ ಪಾಮ್ ಫೆನ್ನಿ 36 ಬಾಟಲುಗಳು , 750 ಎಂ ಎಲ್ ನ ಗೋವಾ 77 ಡೀಲಕ್ಸ ಕ್ಯಾಶು ಫೆನ್ನಿ 6 ಬಾಟಲುಗಳು ಇದ್ದವು. ಈ ಎಲ್ಲಾ ಬಾಟಲುಗಳ ಮೇಲೆ for sale in GOA only ಎಂದು ಬರೆಯಲಾಗಿತ್ತು.

4. ಕಪ್ಪು ಬಣ್ಣದ ಟ್ಯೂಬನ್ನು ಪರಿಶೀಲಿಸಿದಾಗ ಸುಮಾರು 15 ಲೀ ಲೂಜ ಫೆನ್ನಿ ಕಂಡು ಬಂದಿತು. ಇನ್ನೊಂದು ಟ್ಯೂಬನ್ನು ಪರಿಶೀಲಿಸಿದಾಗ ಸುಮಾರು 20 ಲೀ ಲೂಜ ಫೆನ್ನಿ ಕಂಡು ಬಂದಿತು. ಸದರಿ ವಾಹನವನ್ನು ಪರಿಶೀಲಿಸಿದಾಗ ಅದು ಕಪ್ಪು ಬಣ್ಣದ ಹೊಂಡಾ ಕಂಪನಿಯ ಎಕ್ಟಿವಾ ದ್ವಿಚಕ್ರವಾಹನ ಅಗಿತ್ತು , ಅದರ ನೋಂದಣಿ ಸಂಖ್ಯೆ ಕೆ ಎ 30 ಆರ್ 6343 ಎಂದು ನಮೂದಾಗಿತ್ತು. ಯಾವುದೇ ಪಾಸ್ ಯಾ ಪರ್ಮಿಟ ಮತ್ತು ಸದರಿ ವಾಹನದ ಮಾಲೀಕತ್ವದ ಬಗ್ಗೆ ದಾಖಲೆಗಳು ಸಿಗಲಿಲ್ಲಾ.

5. ನಂತರ ರಾಸಾಯನಿಕ ಪರೀಕ್ಷೆಗೋಸ್ಕರ ಚೀಲದಲ್ಲಿದ್ದ ಪ್ರತಿ ಬ್ರಾಂಡಿನ 4 ರಂತೆ ಒಟ್ಟು 8 ಬಾಟಲುಗಳನ್ನು ಮತ್ತು ಒಂದು ಲೀಟರ ಸಾಮರ್ಥ್ಯದ 2 ಬಾಟಲಿಗಳಲ್ಲಿ ಲೂಜ ಫೆನ್ನಿಯನ್ನು ತೆಗೆದು ಅವುಗಳ ಮೇಲೆ ಬಟ್ಟೆ ಸುತ್ತಿ, ದಾರ ಕಟ್ಟಿ, ಸೀಲ್ ಮಾಡಿ ನಾನು, ಚಾಸಾ.2 ಮತ್ತು ಚಾಸಾ.3 ರವರ ಸಹಿ ಇರುವ ಮಾದರಿ ಚೀಟಿ ಅಂಟಿಸಿ ಪಂಚನಾಮೆಯನ್ನು ಮಾಡಲಾಯಿತು. ಪಂಚನಾಮೆಯನ್ನು 2.30 ರಿಂದ 3.30 ರ ವರೆಗೆ ಮಾಡಿ ಮುಗಿಸಲಾಯಿತು. ಈಗ ನಿಪಿ.1 ನ್ನು ನೋಡುತ್ತಿದ್ದು , ಅದನ್ನು ಅದನ್ನು ಗುರುತಿಸುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ಈಗ ನಿಪಿ.2 ನ್ನು ನೋಡುತ್ತಿದ್ದು , ಅದರಲ್ಲಿರುವ ನನ್ನ ಸಹಿಯನ್ನು ನಿಪಿ.2 ಬಿ ಎಂದು ಗುರುತಿಸಲಾಯಿತು. ಈಗ ನಿಪಿ.3 ನ್ನು ನೋಡುತ್ತಿದ್ದು , ಅದರಲ್ಲಿರುವ ನನ್ನ ಸಹಿಯನ್ನು ನಿಪಿ.3 ಬಿ ಎಂದು ಗುರುತಿಸಲಾಯಿತು.

6. ನಂತರ ವಶಪಡಿಸಿಕೊಂಡ ವಾಹನ ಮತ್ತು ಮು ಮಾ ಗಳೊಂದಿಗೆ ಠಾಣೆಗೆ ಬಂದು ಆರೋಪಿತನ ವಿರುದ್ಧ ಸರಕಾರದ ಪರವಾಗಿ ದೂರನ್ನು ದಾಖಲಿಸಿ ಪ್ರ ವ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡೆನು. ಈಗ ನ್ಯಾಯಾಲಯದ ಮುಂದಿರುವ ದೂರನ್ನು

ನೋಡುತ್ತಿದ್ದು , ಅದನ್ನು ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ.6 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.6 ಎ ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಪ್ರ ವ ವರದಿ ನೋಡುತ್ತಿದ್ದು , ಅದನ್ನು ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ.7 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.7 ಎ ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಸ್ವತ್ತು ಪಟ್ಟಿಯನ್ನು ನೋಡುತ್ತಿದ್ದು , ಅದನ್ನು ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ.8 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.8 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು ಮಾ 1 ರಿಂದ 10 ನೋಡಿ ಗುರುತಿಸುತ್ತೇನೆ. ಅವುಗಳ ಮೇಲಿರುವ ನನ್ನ ಸಹಿಯನ್ನು ಮು ಮಾ 1 ಬಿ ರಿಂದ ಮು ಮಾ 10 ಬಿ ಎಂದು ಗುರುತಿಸಲಾಯಿತು.

7. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ದಿನಾಂಕಃ 30.07.2021 ರಂದು ಆರೋಪಿತನು ಮಾನ್ಯ ಸತ್ರ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದು ಠಾಣೆಗೆ ಹಾಜರಾಗಿದ್ದು , ಆತನನ್ನು ಗುರುತಿಸುತ್ತೇನೆ. ಘಟನಾ ಸ್ಥಳದಿಂದ ಓಡಿ ಹೋದ ವ್ಯಕ್ತಿ , ಠಾಣೆಗೆ ಹಾಜರಾದ ವ್ಯಕ್ತಿ ಮತ್ತು ನ್ಯಾಯಾಲಯದ ಮುಂದಿರುವ ವ್ಯಕ್ತಿ ಒಬ್ಬರೇ ಅಗಿರುತ್ತಾರೆ. ಹೆಚ್ಚಿನ ತನಿಖೆಗಾಗಿ ಕಡತವನ್ನು ಚಾಸಾ.6 ರವರಿಗೆ ದಿನಾಂಕಃ 16.04.2021 ರಂದು ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಸಿ ಡಿ ಎನ್ ಆರೋಪಿ ಪರ ವಕೀಲರಿಂದ**

**8.** ಈ ಪ್ರಕರಣದ ಫಿರ್ಯಾದಿ ನಾನೇ ಆಗಿದ್ದು , ಪ್ರ ವ ವರದಿಯನ್ನು ನಾನೇ ದಾಖಲಿಸಿರುತ್ತೇನೆ ಎಂದರೆ ಸರಿ. ನಮ್ಮ ಠಾಣೆಯಲ್ಲಿ ಬೇರೆ ಸಿಬ್ಬಂದಿಗಳು ಇದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮ ಠಾಣೆಯಲ್ಲೇ ನಾವೇ ಪ್ರ ವ ವರದಿಯನ್ನು ದಾಖಲಿಸುವ ಪದ್ದತಿ ಇದೆ. ಈ ಬಗ್ಗೆ ಕ.ಅ.ಕಾ.ಅಥವಾ ನಿಯಮಗಳಲ್ಲಿ ಉಲ್ಲೇಖವಿಲ್ಲ ಎಂದರೆ ನಾವು ಹೀಗೇ ಮಾಡಿಕೊಂಡು ಬರುತ್ತಿದ್ದೇವೆ. ಸಾಮಾನ್ಯವಾಗಿ ನಾವು ಠಾಣೆಯಿಂದ ಹೊರಗೆ ಹೋಗಬೇಕಾದರೆ ಠಾಣಾ ಡೈರಿಯಲ್ಲಿ ನಮೂದಿಸುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿ ಠಾಣಾ ಡೈರಿ ಹಾಜರು ಪಡಿಸಿರುವುದಿಲ್ಲಾ ಎಂದರೆ ತನಿಖಾಧಿಕಾರಿ ಹಾಜರು ಪಡಿಸಬೇಕು. ನಾನು ಚಾಸಾ.6 ರವರಿಗೆ ಕಡತವನ್ನು ಹಸ್ತಾಂತರಿಸಿದಾಗ ಠಾಣಾ ಡೈರಿಯನ್ನು ಅವರಿಗೆ ನೀಡಿರುವುದಿಲ್ಲಾ , ಅದು ಠಾಣೆಯಲ್ಲೇ ಇರುತ್ತದೆ. ಪಂಚರು ನಮ್ಮ ಠಾಣೆಯ ಸಿಬ್ಬಂದಿಗಳಾಗಿದ್ದು , ಅನೇಕ ಪ್ರಕರಣಗಳಲ್ಲಿ ಅವರು ಪಂಚರಾಗಿರುತ್ತಾರೆ ಎಂದರೆ ಅನಿವಾರ್ಯ ಇದ್ದ ಸಂದರ್ಭದಲ್ಲಿ ಮಾತ್ರ ಅವರನ್ನು ಪಂಚರನ್ನಾಗಿ ಮಾಡುತ್ತೇವೆ.

9. ನಾವು ರಾ.ಹೆದ್ದಾರಿಯಿಂದ ಖಾಪ್ರಿ ದೇವಸ್ಥಾನಕ್ಕೆ ಬರಬೇಕಾದರೆ U ಟರ್ನ ಮಾಡಿ ಬರಬೇಕಾಗುತ್ತದೆ ಮತ್ತು ಖಾಪ್ರಿ ದೇವಸ್ಥಾನದಿಂದ ಕಾಳಿ ರಿವರ ಗಾರ್ಡನ , ಕೋಡಿಬಾಗ ರಸ್ತೆಯಲ್ಲಿ ಸಾಕಷ್ಟು ಜನಸಂಚಾರ , ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಹಾಗೆ ಜನಸಂಚಾರ ಮತ್ತು ವಾಹನಸಂಚಾರ ಇರುವುದರಿಂದ ವಾಹನವನ್ನು ವೇಗವಾಗಿ ಚಲಾಯಿಸಲು ಆಗುವುದಿಲ್ಲಾ ಎಂದರೆ ಸರಿಯಲ್ಲ. ನಾವು ಜನರಿಗೆ ಪಂಚರಾಗಿ ಸಹಕರಿಸಲು ಕೋರಿದ್ದು , ಅವರು ಸಹಕರಿಸಿರುವುದಿಲ್ಲಾ ಮತ್ತು ಅವರ ಹೆಸರುಗಳನ್ನು ಹೇಳಿರುವುದಿಲ್ಲಾ. ನಾನು ಜನರನ್ನು ಪಂಚರನ್ನಾಗಿ ಸಹಕರಿಸಲು ಕೇಳಿರುವುದಿಲ್ಲಾ ಆ ಕಾರಣಕ್ಕೆ ಅವರ ಹೆಸರನ್ನು ನಮೂದಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ನಾವು ಅಂಗಜಪ್ತಿ ಮಾಡಿಕೊಂಡಿದ್ದು , ಅಂಗಜಪ್ತಿ ಪಂಚನಾಮೆ ಮಾಡಿರುವುದಿಲ್ಲಾ. ಈ ಬಗ್ಗೆ ನಿಪಿ.1 ರಲ್ಲಿ ನಮೂದಿಸಿರುವುದಿಲ್ಲಾ ಎಂದರೆ ಸರಿ. ಮು ಮಾ ಗಳ ಬ್ಯಾಚ ನಂಬರ, ಸಿರಿಯಲ್ ನಂಬರ ನಿಪಿ.1 ರಲ್ಲಿ ನಮೂದಿಸಿರುವುದಿಲ್ಲಾ ಎಂದರೆ ಮು ಮಾ ಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಕಾರಣ ನಮೂದಿಸಿರುವುದಿಲ್ಲಾ. ಸದರಿ ಮು ಮಾ ಗಳು ನಮ್ಮ ಠಾಣೆಯಲ್ಲಿದ್ದ ಮು ಮಾ ಗಳು ಎಂದರೆ ಸರಿಯಲ್ಲ ಮತ್ತು ಆ ಕಾರಣಕ್ಕಾಗಿ ಅವುಗಳ ಬ್ಯಾಚ ನಂಬರ ಮತ್ತು ಸಿರಿಯಲ್ ನಂಬರ ನಮೂದಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಮಾರುಕಟ್ಟೆಯಲ್ಲಿ ನಿಲ್ಲಿಸಿದ್ದ ವಾಹನದ ಮೇಲೆ ಮು ಮಾ ಗಳನ್ನು ಇರಿಸಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

10. ಘಟನಾ ಸ್ಥಳಕ್ಕೆ ಹೋಗಿಲ್ಲಾ, ಯಾವುದೇ ಮು ಮಾ ಗಳನ್ನು ವಶಪಡಿಸಿಕೊಂಡಿಲ್ಲಾ ಎಂದರೆ ಸರಿಯಲ್ಲ. ಮು ಮಾ ಗಳಿಗೂ ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲಾ ಎಂದರೆ ಸರಿಯಲ್ಲ. ಮು ಮಾ ಗಳಿಗೂ ಮತ್ತು ವಾಹನಕ್ಕೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ವಾರಸುದಾರರು ಇಲ್ಲದೇ ಇರುವಂತಹ ಮು ಮಾ ಗಳನ್ನು ಬಳಸಿಕೊಂಡು ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ಠಾಣೆಯಲ್ಲಿ ತಯಾರು ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.

ಓ. ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾದಂ. ಕಾರವಾರ